**ದಿನಾಂಕಃ 10.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. 4ನೇ ಪ್ರತಿವಾದಿ ನನ್ನ ತಾಯಿಯ ತಾಯಿ ಆಗಿರುತ್ತಾರೆ. ದಾವಾ ಆಸ್ತಿಯ ಸರ್ವೆ ನಂ.64, 1 ಎಕರೆ 23 ಗುಂಟೆ ವಿಸ್ತೀರ್ಣ ಇರುತ್ತದೆ. ನನ್ನ ಅಜ್ಜಿಯ ಜಮೀನನ್ನು ಬಿಟ್ಟುಕೊಡಬೇಕೆಂದು ಕೋರಿ ವಾದಿಯು ದಾವೆ ಹಾಕಿರುತ್ತಾರೆ. ದಾವಾ ಆಸ್ತಿಯನ್ನು ನಾನು ನೋಡಿರುತ್ತೇನೆ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಟಿ ಗೊಲ್ಲಹಳ್ಳಿ ಗ್ರಾಮದಲ್ಲಿ ವಾಸವಿರುವುದಾಗಿ ಹೇಳಿರುತ್ತೇನೆ. ವಾದಿಯು 4ನೇ ಪ್ರತಿವಾದಿ ಸಂತೆಕೋಡಿಹಳ್ಳಿ ಗ್ರಾಮದವರು ಎಂದು ವಾದ ಪತ್ರದಲ್ಲಿ ಹೇಳಿರುತ್ತಾರೆ. ವಾದಿಯು ಹಾಕಿರುವ ವಾದಪತ್ರವನ್ನು ನಾನು ನೋಡಿರುತ್ತೇನೆ. ನಾನು ವಾದಪತ್ರವನ್ನು ನೋಡಿಯೇ ಇಲ್ಲ, 4ನೇ ಪ್ರತಿವಾದಿ ಕೋಡಿಹಳ್ಳಿ ಗ್ರಾಮದ ವಾಸಿಯಲ್ಲ ಈ ಸಂಬಂಧ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

2. 4ನೇ ಪ್ರತಿವಾದಿಯು ಪ್ರತಿ ವಿಚಾರಣೆ ದಿನಾಂಕದಂದು ಹಾಗೂ ಇವತ್ತಿಗೂ ಸಹ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದಾರೆಂದರೆ ಕೆಲವೊಮ್ಮೆ ಬರುತ್ತಾರೆ ಕೆಲವೊಮ್ಮೆ ಆಗುವುದಿಲ್ಲ ಎಂದು ನುಡಿಯುತ್ತಾರೆ. ಈ ದಿನ ನ್ಯಾಯಾಲಯಕ್ಕೆ ಬಂದಿರುತ್ತಾರೆಂದರೆ ಸರಿ. ನನ್ನ ಅಜ್ಜಿಗೆ ಸರಿಯಾಗಿ ಕಿವಿ ಕೇಳಿಸುವುದಿಲ್ಲ ಆದಕಾರಣ ನನಗೆ ವಿಶೇಷ ಅಧಿಕಾರ ಪತ್ರವನ್ನು ಕೊಟ್ಟಿರುತ್ತಾರೆ. ಸಾಕ್ಷಿಯು 4ನೇ ಪ್ರತಿವಾದಿಯ ಎಡಗಡೆ ಕಿವಿ ಕೇಳಿಸುತ್ತದೆ ಬಲಗಡೆಯ ಕಿವಿ ಕೇಳಿಸುವುದಿಲ್ಲ ಮುಂದುವರಿದು ಆಕೆಗೆ ವಿದ್ಯಾಭ್ಯಾಸ ಇರುವುದಿಲ್ಲ ಹೆಬ್ಬೆಟ್ಟು ಹಾಕುತ್ತಾರೆಂದು ನುಡಿಯುತ್ತಾರೆ. 4ನೇ ಪ್ರತಿವಾದಿಯು ಸಾಕ್ಷ್ಯವನ್ನು ನೀಡಿದ್ದೆ ಆದರೆ ಸತ್ಯಾಂಶ ಹೊರಬಹುದು ಎಂಬ ಕಾರಣದಿಂದ ನಾನು ನಿಡಿ-1 ನ್ನು ಅವರ ಮೂಲಕ ಬರೆಸಿಕೊಂಡಿರುತ್ತೇನೆಂದರೆ ಸರಿಯಲ್ಲ.

3. ನಾನು ಎಸ್ ಎಸ್ ಎಲ್ ಸಿ ವರೆಗೂ ವ್ಯಾಸಾಂಗ ಮಾಡಿದ್ದು ಕನ್ನಡ ಓದಲು ಬರೆಯಲು ಬರುತ್ತದೆ. ನಿಡಿ-1 ರಲ್ಲಿ ಏನು ಬರೆದಿರುತ್ತದೆಂದು ನಾನು ಸಂಪೂರ್ಣವಾಗಿ ತಿಳಿದುಕೊಂಡಿಲ್ಲ ಸಾಕ್ಷ್ಯವನ್ನು ನುಡಿಯಲು ಬರೆದುಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ನಿಡಿ-

1 ನ್ನು ಯಾವ ವಕೀಲರು ನೋಟರಿ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ನಿಡಿ-1 ನ್ನು ಸುಮಾರು 6 ರಿಂದ 8 ತಿಂಗಳ ಹಿಂದೆ ಬರೆದುಕೊಟ್ಟಿರುತ್ತಾರೆ. ನಿಡಿ-1 ನ್ನು ಕನಕಪುರದಲ್ಲೇ ತಯಾರು ಮಾಡಿಸಿರುತ್ತೇವೆ. ನಿಡಿ-1ಕ್ಕೆ ನಾನು ಸಹಿ ಮಾಡಿರುತ್ತೇನೆ ಆದರೆ 4ನೇ ಪ್ರತಿವಾದಿ ಸಹಿ ಹಾಕಿರುತ್ತಾರೊ ಹೆಬ್ಬೆಟ್ಟು ಹಾಕಿರುತ್ತಾರೋ ನನಗೆ ಗೊತ್ತಿಲ್ಲ. 4ನೇ ಪ್ರತಿವಾದಿಯ ಹೆಬ್ಬೆಟ್ಟು ಅಥವಾ ಸಹಿಯನ್ನು ಗುರುತಿಸಿರುವ ವಕೀಲರು ಯಾರೆಂದು ನನಗೆ ಗೊತ್ತಿಲ್ಲ. ನಿಡಿ-1 ನ್ನು 4ನೇ ಪ್ರತಿವಾದಿ ಬರೆದುಕೊಟ್ಟಿಲ್ಲ ನಾನೇ ಸೃಷ್ಟಿ ಮಾಡಿಕೊಂಡು ಹಾಕಿರುತ್ತೇನೆಂದರೆ ಸರಿಯಲ್ಲ.

4. ವಾದಿಯು ಎಷ್ಟು ಜನ ಪ್ರತಿವಾದಿಗಳ ವಿರುದ್ದ ದಾವೆ ಹಾಕಿರುತ್ತಾರೆಂದು ನನಗೆ ಗೊತ್ತಿಲ್ಲ. ದಾವೆಯಲ್ಲಿ ಯಾವ ಯಾವ ಪ್ರತಿವಾದಿಗಳು ಏನು ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಚಕ್ಕುಬಂದಿ ಏನೆಂಬುದಾಗಿ ನನಗೆ ಗೊತ್ತಿಲ್ಲ. 1ನೇ ವಾದಿಗೆ ದಾವಾ ಆಸ್ತಿ ಹೇಗೆ ಬಂದಿರುತ್ತದೆ ಎಂಬುದಾಗಿ ನನಗೆ ಗೊತ್ತಿಲ್ಲ. ಸರ್ವೆ ನಂ.64 ತೋಟಿ ಇನಾಮ್ತಿ ಜಮೀನು ಎಂಬುದನ್ನು ಹೊರತುಪಡಿಸಿ ದಾವೆಯಲ್ಲಿನ ಅಂಶಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ಸರ್ಕಾರದಿಂದ ರೀಗ್ರಾಂಡ್ ಆಗಿರುವುದು ನಿಜ ಆದರೆ ಯಾವಾಗ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ತೋಟಿ ಇನಾಮ್ತಿ ಜಮೀನಿನಲ್ಲಿ ಯಾರು ಯಾರು ತೋಟಿದಾರರು ಎಂಬುದಾಗಿ ನನಗೆ ಹೇಳಲು ಆಗುವುದಿಲ್ಲ. ಸದರಿ ತೋಟಿ ವಂಶಸ್ಥರಿಗೆ ರೀಗ್ರಾಂಡ್ ಆಗಿರುವ ಬಗ್ಗೆ ನಾನು ಹೇಳಿದ್ದು ಸುಮಾರು 6 ಎಕರೆಯಷ್ಟು ರೀಗ್ರಾಂಡ್ ಆಗಿರುತ್ತದೆ. ಯಾರು ಯಾರಿಗೆ ಎಷ್ಟೆಷ್ಟು ಜಮೀನು /ವಿಸ್ತೀರ್ಣ ರೀಗ್ರಾಂಡ್ ಆಗಿರುತ್ತದೆಂದು ನನಗೆ ಗೊತ್ತಿಲ್ಲ. ರೀಗ್ರಾಂಡ್ ಆದ ನಂತರ 4/1 ಭಾಗದಂತೆ ಅವರವರಿಗೆ ಬಂದ ಪಾಲಿನಲ್ಲಿ ಅವರೇ ಸ್ವಾಧೀನದಲ್ಲಿದ್ದರು ಎಂದರೆ ನನಗೆ ಗೊತ್ತಿಲ್ಲ.

5. ಸುಮಾರು 70 ನೇ ಇಸವಿಯಿಂದ ವಾದಿ ಹಾಗೂ ಅವರ ತಂದೆಯೇ ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದರು ಎಂದರೆ ಸಾಕ್ಷಿಯು ಇಲ್ಲ ಅದು ನಮ್ಮ ಅಜ್ಜಿಯವರ ತಂದೆಯಾದ ದುಬ್ಬಯ್ಯರವರು ಇದ್ದರು ಎಂದು ನುಡಿಯುತ್ತಾರೆ. ವಾದಿಯು 1974 ನೇ ಇಸವಿಯಲ್ಲಿ ಅವರನ್ನು ಗೇಣಿದಾರರನ್ನಾಗಿ ಪರಿಗಣಿಸಲು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿರುವ

ಬಗ್ಗೆ ನನಗೆ ಗೊತ್ತಿಲ್ಲ. ಅದರಲ್ಲಿ ಯಾರು ಯಾರು ಪ್ರತಿವಾದಿಗಳು ಆಗಿದ್ದರು ಎಂದು ನನಗೆ ಗೊತ್ತಿಲ್ಲ. ನಿಪಿ-13 ರಂತೆ ಚೆಲುವ ಬಿನ್ ಸಿದ್ದಯ್ಯ, ಶಿವಣ್ಣ ಬಿನ್ ಸಿದ್ದಯ್ಯ, ಲಿಂಗಯ್ಯ ಬಿನ್ ಸಿದ್ದಯ್ಯ ಹಾಗೂ ನಾಗಯ್ಯ ಬಿನ್ ಸಿದ್ದಯ್ಯ ಇವರುಗಳ ಮೇಲೆ ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಮೂಲತಃ ಸಿದ್ದಯ್ಯ ರವರ ಸ್ವಾಧೀನದಲ್ಲಿದ್ದ ಜಮೀನುಎಂದರೆ ನನಗೆ ಗೊತ್ತಿಲ್ಲ. ಸಿದ್ದಯ್ಯ ರವರ ಮಗ ನ್ಯಾಯಾಲಯದಲ್ಲಿ ಒಂದು ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿಯವರ ಪ್ರಮಾಣ ಪತ್ರದಲ್ಲಿ ಶಿವಯ್ಯರವರು ಅವರ ತಂದೆಯಾದ ಸಿದ್ದಯ್ಯರವರಿಗೆ ಆಸ್ತಿಯು ರೀಗ್ರಾಂಡ್ ಆಗಿದ್ದು ಅದು ದುಬ್ಬಯ್ಯರವರಿಗೆ ಸೇರಿದ ಸ್ವತ್ತಲ್ಲ ಎಂದು ಹೇಳಿರುತ್ತಾರೆಂದರೆ ನನಗೆ ಗೊತ್ತಿಲ್ಲ.

6. ಭೂ ನ್ಯಾಯ ಮಂಡಳಿಯಲ್ಲಿ ದಿಃ13.07.1999 ರಂದು ವಾದಿಯೇ ಗೇಣಿದಾರರು ಎಂಬುದಾಗಿ ಆದೇಶವಾಗಿರುತ್ತದೆಂದರೆ ನನಗೆ ಗೊತ್ತಿಲ್ಲ. ಈ ಆದೇಶವನ್ನು ನಾವು ಯಾವುದೇ ಸಕ್ಷಮ ಪ್ರಾಧಿಕಾರದ ಮುಂದೆ ಪ್ರಶ್ನೆ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ರೀಗ್ರಾಂಡ್ ಆದ ನಂತರ ಸರ್ವೆ ನಂ.64 ಪೋಡಿಯಾಗಿ ಸರ್ವೆ ನಂ.64/2 ಆಗಿರುತ್ತದೆಂದರೆ ನನಗೆ ಗೊತ್ತಿಲ್ಲ. ಮಂಜೂರಾತಿ ಆದೇಶದ ಮೇರೆಗೆ ವಾದಿಯ ಹೆಸರಿನಲ್ಲಿ ಎಂಆರ್ 3/99-2000 ಎಂಬಂತೆ ದಾಖಲಾಗಿರುತ್ತದೆಂದರೆ ನನಗೆ ಗೊತ್ತಿಲ್ಲ. ವಾದಿಯು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ಪಹಣಿಗಳಲ್ಲಿ 1970 ರಿಂದ ಪ್ರಸ್ತುತವರೆಗೂ ಪಹಣಿಯಲ್ಲಿ ವಾದಿಯ ಹೆಸರೇ ಬರುತ್ತಿದೆ ಎಂದರೆ ಸಾಕ್ಷಿಯು 1990 ರಿಂದ 2000 ಮಧ್ಯೆದಲ್ಲಿ ದುಬ್ಬಯ್ಯ ಹಾಗೂ ಅವರ ಅಣ್ಣ ತಮ್ಮಂದಿರ ಹೆಸರಿನಲ್ಲಿ ಬರುತ್ತಿದೆ ಎಂದು ನುಡಿಯುತ್ತಾರೆ. ಪಹಣಿಯಲ್ಲಿ ಅನುಭವದ ಕಾಲಂನಲ್ಲಿ ಯಾರ ಹೆಸರು ಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. 1970ರಿಂದ ಪ್ರಸ್ತುತವರೆಗೂ ಅನುಭವದಾರರ ಕಾಲಂನಲ್ಲಿ ವಾದಿಯ ಹೆಸರೇ ಬರುತ್ತಿದೆ ಎಂದರೆ ನನಗೆ ಗೊತ್ತಿಲ್ಲ.

7. ವಾದಿಗೆ ಗ್ರಾಂಡ್ ಆಗಿರುವ ದಾವಾ ಸ್ವತ್ತಿನ ಚಕ್ಕುಬಂದಿ ಮತ್ತು ವಿಸ್ತೀರ್ಣದ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ಪ್ರಮಾಣ ಪತ್ರದಲ್ಲಿ ರೀಗ್ರಾಂಡ್ ಆದ ಮೇಲೆ ಜಂಟಿ ಸ್ವಾಧೀನದಲ್ಲಿದ್ದಾರೆಂದು ಹೇಳಿದ್ದು ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ.

ನಾನು ಸಲ್ಲಿಸಿರುವ ಪ್ರಮಾಣ ಪತ್ರವು ಇಂಗ್ಲೀಷ್ ನಲ್ಲಿ ಬರವಣಿಗೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಪ್ರಮಾಣ ಪತ್ರವನ್ನು ಯಾರು ಎಲ್ಲಿ ಹೇಗೆ ತಯಾರು ಮಾಡಿಸಿರುತ್ತಾರೆಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತು ವಾದಿಗೆ ಸೇರಿದ ಸ್ವತ್ತು ಆಗಿರುತ್ತದೆ ಕೇವಲ 4ನೇ ಪ್ರತಿವಾದಿಯ ಮಾತನ್ನು ಕೇಳಿನನಗೆ ದಾವೆಯ ಸಂಬಂಧ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹಿತ ಸುಳ್ಳು ಸಾಕ್ಷೆ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಪ್ರಸ್ತುತ ದಾವೆಯಲ್ಲಿ ಸಲ್ಲಿಸಿರುವ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. 4ನೇ ಪ್ರತಿವಾದಿಯು ಯಾವಾಗ ಹಾಗೂ ಯಾವ ಯಾವ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆಂದು ನನಗೆ ಗೊತ್ತಿಲ್ಲ. 4ನೇ ಪ್ರತಿವಾದಿಯು ಪ್ರಸ್ತುತ ಪ್ರಕರಣದಲ್ಲಿ ಏನು ಸಾಕ್ಷ್ಯವನ್ನು ಕೊಟ್ಟಿರುತ್ತಾರೆಂದು ನನಗೆ ಗೊತ್ತಿಲ್ಲ ಎಂದರೆ ಸರಿ.

**ಮರುವಿಚಾರಣೆಃ ಇರುವುದಿಲ್ಲ .**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

**ಅಪರ ಸಿಜೆ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**